ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1840
2. ಸದಸ್ಯರ ಹೆಸರು : ಶ್ರೀ.ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 15-03-2022
4. ಉತ್ತರಿಸುವ ಸಚಿವರು : ಸಹಕಾರ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಬೆಂಗಳೂರು ನಗರದ ಹೊರವಲಯದಲ್ಲಿರುವ ದಾಸನಪುರ ಉಪ ಮಾರುಕಟ್ಟೆಯನ್ನು ಯಾವಾಗ ಸ್ಥಾಪನೆ ಮಾಡಲಾಯಿತು; ಉಪ ಮಾರುಕಟ್ಟೆ ನಿರ್ಮಾಣದ ಉದ್ದೇಶಗಳೇನು; ಇದರ ವಿಸ್ತೀರ್ಣವೆಷ್ಟು; ಈ ಮಾರುಕಟ್ಟೆಯಲ್ಲಿ ವ್ಯಾಪಾರ ವಹಿವಾಟುಗಳು ನಡೆಯುತ್ತಿವೆಯೇ; (ಸಂಪೂರ್ಣ ವಿವರ ನೀಡುವುದು)	ದಾಸನಪುರ ಉಪ ಮಾರುಕಟ್ಟೆಯನ್ನು ದಿನಾಂಕ:07.10.2009ರಂದು ಸ್ಥಾಪಿಸಲಾಗಿದೆ. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಂಗಳೂರು ಸಮಿತಿಯ ಯಶವಂತಪುರ ಮುಖ್ಯ ಮಾರುಕಟ್ಟೆ ಪ್ರಾಂಗಣಕ್ಕೆ ಈರುಳ್ಳಿ, ಆಲೂಗಡ್ಡೆಯನ್ನು ಮಾರಾಟಕ್ಕೆಂದು ತರುವ ರೈತರು ದಲ್ಲಾಲಿ/ವರ್ತಕರ ಅಂಗಡಿಗಳಿಗೆ ತಲುಪಲು ಹಾಗೂ ಅದೇ ದಿನ ವಹಿವಾಟು ಪೂರ್ಣಗೊಳ್ಳಲು ತೊಂದರೆಯಾಗುತ್ತಿದ್ದುದನ್ನು ತಪ್ಪಿಸುವ ಉದ್ದೇಶದಿಂದ ದಾಸನಪುರ ಉಪ ಮಾರುಕಟ್ಟೆಯನ್ನು ನಿರ್ಮಿಸಲಾಗಿರುತ್ತದೆ. ಸದರಿ ಮಾರುಕಟ್ಟೆಯ ವಿಸ್ತೀರ್ಣ-67.25 ಎಕರೆ. ಈ ಮಾರುಕಟ್ಟೆಯಲ್ಲಿ ವ್ಯಾಪಾರ ವಹಿವಾಟು ನಡೆಯುತ್ತಿದ್ದು, ಕಳೆದ 03 ವರ್ಷಗಳ ವಹಿವಾಟಿನ ವಿವರ ಈ ಕೆಳಕಂಡಂತಿದೆ.

ವರ್ಷ	(ಯಶವಂತಪುರ ಮುಖ್ಯ ಮಾರುಕಟ್ಟೆ ಪ್ರಾಂಗಣ) ಬಳಕೆದಾರರ ಶುಲ್ಕದ ಮೊತ್ತ (ರೂ.ಕೋಟಿಗಳಲ್ಲಿ)	(ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣ) ಬಳಕೆದಾರರ ಶುಲ್ಕದ ಮೊತ್ತ (ರೂ.ಕೋಟಿಗಳಲ್ಲಿ)
2018-19	**12.92 (ಪ್ರತ್ಯೇಕಿಸಿರುವುದಿಲ್ಲ)**	
2019-20	19.77	1.11
2020-21	6.57	2.00
2021-22 (ಜನವರಿ-2022ರ ಅಂತ್ಯದವರೆಗೆ)	3.97	3.36

ಆ	ಈ ಉಪಮಾರುಕಟ್ಟೆಯಲ್ಲಿ ನಿರ್ಮಿಸಿರುವ ಮೂಲ ಸೌಕರ್ಯಗಳೇನು: ಎಷ್ಟು ಅಂಗಡಿ ಮಳಿಗೆ/ಗೋದಾಮುಗಳನ್ನು ನಿರ್ಮಿಸಲಾಗಿದೆ: ಇದಕ್ಕಾಗಿ ಖರ್ಚಾಗಿರುವ ಅನುದಾನವೆಷ್ಟು: (ಸಂಪೂರ್ಣ ವಿವರ ವಿವರ ನೀಡುವುದು)	**<u>ಎ ಮತ್ತು ಬಿ ಬ್ಲಾಕ್‌ಗಳಲ್ಲಿ</u>** ಈರುಳ್ಳಿ ಮತ್ತು ಆಲೂಗಡ್ಡೆ ಉತ್ಪನ್ನಗಳ ವಹಿವಾಟಿಗೆ ಅವಕಾಶವಾಗುವಂತೆ ಮೂಲಭೂತ ಸೌಲಭ್ಯಗಳೊಂದಿಗೆ ಅಭಿವೃದ್ಧಿಪಡಿಸ- ಲಾಗಿರುತ್ತದೆ. ಪ್ರಾಂಗಣದ ಸುತ್ತಲೂ ಕಲ್ಲು ಕಟ್ಟಡದ ಕಾಂಪೌಂಡ್ ಗೋಡೆ ನಿರ್ಮಿಸಲಾಗಿದ್ದು ಕೆಳಕಂಡಂತೆ ಕಟ್ಟಡಗಳನ್ನು ನಿರ್ಮಿಸಿ ಮೂಲ ಸೌಕರ್ಯಗಳನ್ನು ಕಲ್ಪಿಸಲಾಗಿದೆ. 30x40 ಅಡಿ ವಿಸ್ತೀರ್ಣದ 178 ಅಂಗಡಿ-ವ-ಮಳಿಗೆಗಳು, 40x60 ಅಡಿ ವಿಸ್ತೀರ್ಣದ 34 ಅಂಗಡಿ-ವ-ಮಳಿಗೆಗಳು, 18x30 ಅಡಿ ವಿಸ್ತೀರ್ಣದ 28 ಚಿಕ್ಕ ಮಳಿಗೆಗಳು 100 ಮೆಟ್ರಿಕ್ ಟನ್ ಸಾಮರ್ಥ್ಯದ 02 ಸಂಖ್ಯೆ ಗೋದಾಮುಗಳು, 60 ಮೆಟ್ರಿಕ್ ಟನ್ ಸಾಮರ್ಥ್ಯದ 02 ಸಂಖ್ಯೆ ವೇಬ್ರಿಡ್ಜ್, 01 ಉಪಹಾರ ಗೃಹ, 02 ಸಂಖ್ಯೆ ಎಸ್.ಟಿ.ಪಿ. ಘಟಕಗಳು, 01 ಸಂಖ್ಯೆ ಘನತ್ಯಾಜ್ಯ ನಿರ್ವಹಣಾ ಘಟಕ, 04 ತನಿಖಾ ಠಾಣೆಗಳು, 100 ಎಲ್.ಪಿ.ಹೆಚ್ ಸಾಮರ್ಥ್ಯದ 05 ಶುದ್ಧ ಕುಡಿಯುವ ನೀರಿನ ಘಟಕಗಳು, 02 ಸಂಖ್ಯೆ ಸಾರ್ವಜನಿಕ ಶೌಚಾಲಯಗಳು, 04 ಸಂಖ್ಯೆ ಯೂರಿನಲ್ ಬ್ಲಾಕ್‌ಗಳು, 1.00 ಲಕ್ಷ ಲೀಟರ್ ನೀರು ಸಂಗ್ರಹಣೆ ಸಾಮರ್ಥ್ಯ ಹೊಂದಿರುವ ಸಂಪ್, 04 ಸಂಖ್ಯೆ ಕೊಳವೆ ಬಾವಿ, ಹಾಗೂ ಓವರ್ ಹೆಡ್ ಟ್ಯಾಂಕ್, ವಿದ್ಯುತ್ ಸೌಲಭ್ಯ, 40x100 ಅಡಿ ವಿಸ್ತೀರ್ಣದಲ್ಲಿ 12 ಸಂಖ್ಯೆ ಮುಚ್ಚು ಹರಾಜು ಕಟ್ಟೆಗಳು ಹಾಗೂ ಸುಸಜ್ಜಿತ ವಿಶಾಲವಾದ ಕಾಂಕ್ರೀಟ್ ರಸ್ತೆ ಮತ್ತು ಕಾಂಕ್ರೀಟ್ ಚರಂಡಿಗಳನ್ನು ಹೊಂದಿರುತ್ತದೆ. ಪ್ರಸ್ತುತ ಡಬ್ಲ್ಯೂ.ಐ.ಎಫ್ ಯೋಜನೆಯಡಿಯಲ್ಲಿ ರೂ.14.00 ಕೋಟಿ ವೆಚ್ಚದಲ್ಲಿ 98 ಅಂಗಡಿ-ವ-ಮಳಿಗೆಗಳು, 02 ಸಂಖ್ಯೆ ಶುದ್ಧ ಕುಡಿಯುವ ನೀರಿನ ಘಟಕಗಳು, 04 ಸಂಖ್ಯೆ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಾಣ ಮಾಡಲಾಗುತ್ತಿದೆ. **<u>ಡಿ-ಬ್ಲಾಕ್‌ನಲ್ಲಿ</u>** ಆಡಳಿತ ಕಛೇರಿ, 02 ಸಂಖ್ಯೆ ಬ್ಯಾಂಕ್ ಕಟ್ಟಡ, ಅಂಚೆ ಕಛೇರಿ, ಪೊಲೀಸ್ ಸ್ಟೇಷನ್, ವಿದ್ಯುತ್ ಸೌಲಭ್ಯ, 02 ಸಂಖ್ಯೆ ಕೊಳವೆ ಬಾವಿ, ರೈತಭವನ ಇದೆ. **<u>ಸಿ-ಬ್ಲಾಕ್‌ನಲ್ಲಿ</u>** ಡಬ್ಲ್ಯೂ.ಐ.ಎಫ್ ಯೋಜನೆಯಡಿಯಲ್ಲಿ 2013-14, 2014-15 ಹಾಗೂ 2017-18 ಸಾಲುಗಳಲ್ಲಿ ಒಟ್ಟು ರೂ.63.00 ಕೋಟಿ ವೆಚ್ಚದಲ್ಲಿ 168 ಸಂಖ್ಯೆ ಅಂಗಡಿ-ವ-ಮಳಿಗೆಗಳು, 1000 ಮೆಟ್ರಿಕ್ ಟನ್ ಸಾಮರ್ಥ್ಯದ ಶೀಥಲಗೃಹ, 12 ಸಂಖ್ಯೆ ಮುಚ್ಚು ಹರಾಜುಕಟ್ಟೆ, 01 ಸಂಖ್ಯೆ ಎಸ್.ಟಿ.ಪಿ. ಘಟಕ, 04 ಸಂಖ್ಯೆ ಶುದ್ಧ ಕುಡಿಯುವ ನೀರಿನ ಘಟಕ, 04 ಸಂಖ್ಯೆ ಶೌಚಾಲಯ, ಚೆಕ್ ಪೋಸ್ಟ್, 01 ಸಂಖ್ಯೆ ಕ್ಯಾಂಟೀನ್, ವಿದ್ಯುತ್ ಸೌಲಭ್ಯ, 03 ಸಂಖ್ಯೆ ಕೊಳವೆ ಬಾವಿ ಹಾಗೂ ಸುಸಜ್ಜಿತ ವಿಶಾಲವಾದ ಕಾಂಕ್ರೀಟ್ ರಸ್ತೆಗಳು ಮತ್ತು ಕಾಂಕ್ರೀಟ್ ಚರಂಡಿ ನಿರ್ಮಿಸುವ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಪ್ರಗತಿಯಲ್ಲಿದೆ. ಸದರಿ ಕಾಮಗಾರಿಯು ಮಾರ್ಚ್-2022ರ ಅಂತ್ಯಕ್ಕೆ ಪೂರ್ಣಗೊಳ್ಳಲಿದೆ. **<u>ಇ-ಬ್ಲಾಕ್‌ನಲ್ಲಿ</u>** 17.15 ಎಕರೆ ಹೊಂದಿದ್ದು, ತರಕಾರಿ ಮಾರುಕಟ್ಟೆಗಾಗಿ 210 ಅಂಗಡಿ-ವ-ಮಳಿಗೆಗಳು, 07 ಮುಚ್ಚು ಹರಾಜು ಕಟ್ಟೆಗಳು, 07 ಸಣ್ಣ ಅಂಗಡಿ-ವ-ಮಳಿಗೆಗಳು, 02 ಶುದ್ಧ ಕುಡಿಯುವ ನೀರಿನ ಘಟಕಗಳು, ರೈತರ ನೇರ ಮಾರಾಟ ಕೇಂದ್ರ, 01 ಎಸ್.ಟಿ.ಪಿ.ಘಟಕ, 05 ಸಂಖ್ಯೆ ಸಾರ್ವಜನಿಕ ಶೌಚಾಲಯ, 02

....3

		ಸಂಖ್ಯೆ ಚೆಕ್ ಪೋಸ್ಟ್, 05 ಸಂಖ್ಯೆ ಯೂರಿನಲ್ಸ್, 1.00 ಲಕ್ಷ ಲೀಟರ್ ಸಾಮರ್ಥ್ಯದ ನೀರಿನ ಸಂಪ್, 03 ಸಂಖ್ಯೆ ಕೊಳವೆ ಬಾವಿ ಹಾಗೂ ಓವರ್ ಹೆಡ್ ಟ್ಯಾಂಕ್ ಹಾಗೂ ಸುಸಜ್ಜಿತ ವಿಶಾಲವಾದ ಕಾಂಕ್ರೀಟ್ ರಸ್ತೆ ಮತ್ತು ಕಾಂಕ್ರೀಟ್ ಚರಂಡಿ ಹೊಂದಿದ್ದು, ಈಗಾಗಲೇ ತರಕಾರಿ ಸಗಟು ವ್ಯಾಪಾರ ವಹಿವಾಟು ನಡೆಯುತ್ತಿರುತ್ತದೆ. ಜಮೀನು ಖರೀದಿ ಹಾಗೂ ಈ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಲುವಾಗಿ ಇದುವರೆವಿಗೂ ಒಟ್ಟಾರೆ ರೂ.306.50 ಕೋಟಿ ಮೊತ್ತವನ್ನು ವೆಚ್ಚ ಮಾಡಲಾಗಿರುತ್ತದೆ.
ಇ	ಇಲ್ಲಿ ಎಷ್ಟು ಅಂಗಡಿ ಮಳಿಗೆ/ ಗೋದಾಮುಗಳನ್ನು ಹಂಚಿಕೆ ಮಾಡಲಾಗಿದೆ; ಎಷ್ಟು ಖಾಲಿ ಉಳಿದಿವೆ; ಈ ಮಾರುಕಟ್ಟೆಯಲ್ಲಿ ಯಾವ ಯಾವ ಪದಾರ್ಥಗಳ ಮಾರಾಟಕ್ಕೆ ಅವಕಾಶ ಕಲ್ಪಿಸಲಾಗಿದೆ; (ಸಂಪೂರ್ಣ ವಿವರ ನೀಡುವುದು)	ಎ ಮತ್ತು ಬಿ ಬ್ಲಾಕ್‌ನಲ್ಲಿನ 214 ಅಂಗಡಿ-ವ-ಗೋದಾಮುಗಳಲ್ಲಿ 44 ಮಳಿಗೆಗಳನ್ನು ಅಕ್ಕಿ/ಬೇಳೆ ವ್ಯಾಪಾರಸ್ಥರಿಗೆ, 167 ಅಂಗಡಿ-ವ- ಗೋದಾಮುಗಳನ್ನು ಈರುಳ್ಳಿ/ ಆಲೂಗಡ್ಡೆ/ ಬೆಳ್ಳುಳ್ಳಿ ವ್ಯಾಪಾರಸ್ಥರಿಗೆ ಹಂಚಿಕೆ ಮಾಡಲಾಗಿದೆ. ಉಳಿದ 03 ಗೋದಾಮುಗಳಲ್ಲಿ 01 ಚೆಕ್‌ಪೋಸ್ಟ್, 01-ಘನತ್ಯಾಜ್ಯ ನಿರ್ವಹಣಾ ಘಟಕ, ಹಾಗೂ 01- ಗೋದಾಮು ಸಮಿತಿಯ ವಶದಲ್ಲಿರುತ್ತದೆ. ಆರಂಭದಲ್ಲಿ ಈರುಳ್ಳಿ ಮತ್ತು ಆಲೂಗಡ್ಡೆ ಉತ್ಪನ್ನಗಳನ್ನು ಮಾರಾಟ ನಿಯಂತ್ರಣಕ್ಕೆ ಒಳಪಡಿಸಲಾಗಿತ್ತು. ತದನಂತರ, 89 ಕೃಷಿ ಉತ್ಪನ್ನಗಳನ್ನು ಮಾರಾಟ ನಿಯಂತ್ರಣಕ್ಕೊಳಪಡಿಸಿ ಘೋಷಿಸಲಾಗಿರುತ್ತದೆ. ಸಂಪೂರ್ಣ ವಿವರವನ್ನು **ಅನುಬಂಧ-1** ಹಾಗೂ **ಅನುಬಂಧ-2ರಲ್ಲಿ** ಒದಗಿಸಿದೆ.
ಈ	ಈ ಉಪ ಮಾರುಕಟ್ಟೆಯಲ್ಲಿ ಮಳಿಗೆ/ಗೋದಾಮುಗಳನ್ನು ಹೊಂದಿರುವ ವ್ಯಾಪಾರಸ್ಥರು ಇತ್ತೀಚೆಗೆ ಹಲವಾರು ಬಾರಿ ಪ್ರತಿಭಟನೆಗಳನ್ನು ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅವರ ಬೇಡಿಕೆಗಳೇನು; ಆ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು)	ಹೌದು. ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಮಳಿಗೆಗಳನ್ನು ಲೀವ್ ಅಂಡ್ ಲೈಸೆನ್ಸ್ ಶುಲ್ಕದ ಆಧಾರದ ಮೇಲೆ ಹಂಚಿಕೆ ಪಡೆದಿರುವ ಈರುಳ್ಳಿ/ಆಲೂಗಡ್ಡೆ/ಬೆಳ್ಳುಳ್ಳಿ ವ್ಯಾಪಾರಸ್ಥರು ಮಾಸಿಕ ಶುಲ್ಕವನ್ನು ಮನ್ನಾ ಮಾಡುವಂತೆ ಮನವಿ ಸಲ್ಲಿಸಿರುತ್ತಾರೆ. ಮಾರುಕಟ್ಟೆ ಸಮಿತಿಗಳ ಆದಾಯಗಳಲ್ಲಿ ಲೀವ್ ಅಂಡ್ ಲೈಸೆನ್ಸ್ ಶುಲ್ಕವು ಪ್ರಮುಖ ಆದಾಯವಾಗಿದ್ದು, ಮಾರುಕಟ್ಟೆ ಪ್ರಾಂಗಣಗಳ ನಿರ್ವಹಣೆ ಹಾಗೂ ಅಭಿವೃದ್ಧಿಗಾಗಿ ವಿನಿಯೋಗಿಸಲಾಗುತ್ತಿರುವ ಹಿನ್ನಲೆಯಲ್ಲಿ ಲೀವ್ ಅಂಡ್ ಲೈಸೆನ್ಸ್ ಶುಲ್ಕವನ್ನು ಮನ್ನಾ ಮಾಡಲು ಅವಕಾಶವಿರುವುದಿಲ್ಲ. ಉಳಿದಂತೆ ಕೋವಿಡ್-19 ರ ಮೊದಲನೇ ಹಾಗೂ ಎರಡನೇ ಅಲೆ ಸಂದರ್ಭದಲ್ಲಿ ಮೇ ಹಾಗೂ ಜೂನ್ 2020 ತಿಂಗಳುಗಳಲ್ಲಿ ಹಣ್ಣು, ಹೂವು ಮತ್ತು ತರಕಾರಿ ಉತ್ಪನ್ನಗಳ ಮೇಲೆ ವಿಧಿಸುತ್ತಿದ್ದ ಬಳಕೆದಾರರ ಶುಲ್ಕಕ್ಕೆ ವಿನಾಯಿತಿ ನೀಡಲಾಗಿರುತ್ತದೆ.

		ಒಂದೇ ಮಾರುಕಟ್ಟೆ ಮಾಡಿ ಶಾಶ್ವತ ಪರಿಹಾರ ನೀಡುವಂತೆ ಮನವಿ ಸಲ್ಲಿಸಿರುವುದು ಗಮನಕ್ಕೆ ಬಂದಿರುತ್ತದೆ. ದಾಸನಪುರ ಉಪ ಮಾರುಕಟ್ಟೆಯಲ್ಲಿ ಮಳಿಗೆ/ಹರಾಜುಕಟ್ಟೆ ಹಂಚಿಕೆ ಪಡೆದವರನ್ನು ಹೊರತುಪಡಿಸಿ ಉಳಿದವರಿಗೆ ಪೂರ್ಣ ಪ್ರಮಾಣದಲ್ಲಿ ಸ್ಥಳಾವಕಾಶವನ್ನು ಕಲ್ಪಿಸಲು ಸಾಧ್ಯವಾಗದ ಕಾರಣ, ಪೂರ್ಣ ಪ್ರಮಾಣದಲ್ಲಿ ವಹಿವಾಟು ಸ್ಥಳಾಂತರಿಸಲು ಸಾಧ್ಯವಾಗಿರುವುದಿಲ್ಲ. ಅಲ್ಲದೇ ದಾಸನಪುರ ಉಪ ಮಾರುಕಟ್ಟೆಯಲ್ಲಿ ಎ, ಬಿ ಮತ್ತು ಸಿ ಬ್ಲಾಕ್‌ನಲ್ಲಿ ನಿರ್ಮಿಸಲಾಗುತ್ತಿರುವ ಅಂಗಡಿ-ವ-ಮಳಿಗೆಗಳ ಕಾಮಗಾರಿಯು ಪ್ರಗತಿಯಲ್ಲಿದ್ದು, ಕಾಮಗಾರಿ ಪೂರ್ಣಗೊಂಡ ನಂತರ ಉಳಿದ ಅರ್ಹ ಈರುಳ್ಳಿ, ಆಲೂಗಡ್ಡೆ ವರ್ತಕರುಗಳಿಗೆ ಹಂಚಿಕೆ ಮಾಡಲು ಕ್ರಮ ವಹಿಸಿ ವ್ಯಾಪಾರ ವಹಿವಾಟನ್ನು ಮುಂದಿನ ದಿನಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಸ್ಥಳಾಂತರಿಸಲಾಗುವುದು.

ಸಂಖ್ಯೆ: 67 ಎಂಆರ್‌ಇ 2022

(ಎಸ್.ಟಿ.ಸೋಮಶೇಖರ್)
ಸಹಕಾರ ಸಚಿವರು

ಅನುಬಂಧ-1

2	ಎಂ.ಜಿ.ಮುಳಕೂರ ಸರ್ಕಾರದ ಅಧೀನ ಕಾರ್ಯದರ್ಶಿ-2 ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕೊಠಡಿ ಸಂಖ್ಯೆ: 229, 2ನೇ ಮಹಡಿ ವಿಕಾಸಸೌಧ, ಅಂಬೇಡ್ಕರ್ ವೀದಿ ಬೆಂಗಳೂರು- 560001. ದೂರವಾಣಿ ಸಂಖ್ಯೆ:22034598	ಸೈಯದ್ ರಫೀವುಲ್ಲಾ ಶಾಖಾಧಿಕಾರಿ-ಬಿ ಶಾಖೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕೊಠಡಿ ಸಂಖ್ಯೆ:229, 2ನೇ ಮಹಡಿ, ವಿಕಾಸಸೌಧ, ಅಂಬೇಡ್ಕರ್‌ವೀಧಿ ಬೆಂಗಳೂರು-560001. ದೂರವಾಣಿ ಸಂಖ್ಯೆ: 22034605	

(xvii) ನಿಗದಿಪಡಿಸಲಾದ ಇತರೆ ಮಾಹಿತಿಗಳು ಯಾವುದೂ ಇಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಜಿ.ಮುಳಕೂರ
ಸರ್ಕಾರದ ಅಧೀನ ಕಾರ್ಯದರ್ಶಿ-2,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

PR.318

ಕೃಷಿ ಮಾರಾಟ ಇಲಾಖೆ

ಕೃಷಿ ಮಾರಾಟ ನಿರ್ದೇಶಕರ ಕಛೇರಿ, ನಂ.16, 2ನೇ ರಾಜಭವನ ರಸ್ತೆ, ಪಿ.ಬಿ.ನಂ.5309, ಬೆಂಗಳೂರು-01

ಅಧಿಸೂಚನೆ ಸಂ:ಕೃಮಾಇ/246/ನಿಯವಿ/2009 ದಿ:07.10.2009

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966 ರ ಪ್ರಕರಣ 6 ರ ಉಪ ಪ್ರಕರಣ (2) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕದಲ್ಲಿ ಕೃಷಿ ಮಾರಾಟ ಇಲಾಖೆಯ ನಿರ್ದೇಶಕನಾಗಿರುವ ಜಿ.ರಾಮಚಂದ್ರ ಆದ ನಾನು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಂಗಳೂರು ಇದರ ಮಾರುಕಟ್ಟೆ ಕ್ಷೇತ್ರವಲ್ಲಿ ಕಾಲಕಾಲಕ್ಕೆ ಹೊರಡಿಸಲಾದ ಅಧಿಸೂಚನೆಗಳ ಮೂಲಕ ಮಾರಾಟ ನಿಯಂತ್ರಣಕ್ಕೆ ಒಳಪಡಿಸಿರುವ ಆಲೂಗಡ್ಡೆ ಮತ್ತು ಈರುಳ್ಳಿ ಕೃಷಿ ಉತ್ಪನ್ನಗಳ ಮಾರಾಟ ನಿಯಂತ್ರಣಕ್ಕಾಗಿ ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮಾರುಕಟ್ಟೆ ಕ್ಷೇತ್ರದ ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಗೆ ಸೇರಿದ ಮತ್ತಹಳ್ಳಿ, ಪಿಳ್ಳಹಳ್ಳಿ ಮತ್ತು ವಡೇರಹಳ್ಳಿಯಲ್ಲಿ ಗ್ರಾಮದ ಪರಿಮಿತಿಯೊಳಗಿನ ಪ್ರದೇಶವನ್ನು ಉಪಮಾರುಕಟ್ಟೆ ಎಂದು ಕೆಳಗಿನ ಅನುಸೂಚಿಯಲ್ಲಿನ ವಿವಿಧ ಸರ್ವೆ ನಂಬರುಗಳಲ್ಲಿನ ಒಟ್ಟು 67.25 ಎಕರೆ ಪ್ರದೇಶವನ್ನು ಉಪ ಮಾರುಕಟ್ಟೆ ಪ್ರಾಂಗಣ ಎಂದು ಈ ಮೂಲಕ ಘೋಷಿಸಿದ್ದೇನೆ.

ಅನುಸೂಚಿ

ಗ್ರಾಮದ ಹೆಸರು	ಸರ್ವೆ ನಂ	ಜಮೀನಿನ ವಿಸ್ತೀರ್ಣ	ಸರ್ಕಾರಿ ಜಮೀನಿಗೆ ಚೆಕ್ಕುಬಂದಿಗಳು	
ಮತ್ತಹಳ್ಳಿ	40	6.10	ಪೂರ್ವಕ್ಕೆ	ವಡೇರಹಳ್ಳಿ ಗಡಿ ಮತ್ತು ಸರ್ವೆ ನಂ.20
			ಪಶ್ಚಿಮಕ್ಕೆ	ಸರ್ವೆ ನಂ.41
			ಉತ್ತರಕ್ಕೆ	ರೈಲ್ವೆ ಲೈನ್ ಮತ್ತು ಸರ್ವೆ ನಂ.41
			ದಕ್ಷಿಣಕ್ಕೆ	ವಡೇರಹಳ್ಳಿ ಗಡಿ
	41	20.03	ಪೂರ್ವಕ್ಕೆ	ಸರ್ವೆ ನಂ.40
			ಪಶ್ಚಿಮಕ್ಕೆ	ರಸ್ತೆ
			ಉತ್ತರಕ್ಕೆ	ಉಳಿಕೆ ಜಮೀನು
			ದಕ್ಷಿಣಕ್ಕೆ	ವಡೇರಹಳ್ಳಿ ಸರ್ವೆ ನಂ.20
ಪಿಳ್ಳಹಳ್ಳಿ	52	17.15	ಪೂರ್ವಕ್ಕೆ	ಸರ್ವೆ ನಂ.53 ಮತ್ತು ಕಣ್ಣ ಬಡಾವಣೆ
			ಪಶ್ಚಿಮಕ್ಕೆ	ಸರ್ವೆ ನಂ.52 ರ ಉಳಿಕೆ ಮತ್ತು ಹಿಡುವಳಿ ಜಮೀನು
			ಉತ್ತರಕ್ಕೆ	ರಸ್ತೆ ಹಾಗೂ ಹಿಡುವಳಿ ಜಮೀನು
			ದಕ್ಷಿಣಕ್ಕೆ	ಹಿಡುವಳಿ ಜಮೀನು ಮತ್ತು ಕಣ್ಣ ಬಡಾವಣೆ ಹಾಗೂ ರೈಲ್ವೆ ಲೈನು
	53	7.18	ಪೂರ್ವಕ್ಕೆ	ರಸ್ತೆ ಮತ್ತು ಸರ್ವೆ ನಂ.41
		10.00	ಪಶ್ಚಿಮಕ್ಕೆ	ಉಳಿಕೆ ಜಮೀನು ಮತ್ತು ಸರ್ವೆ ನಂ.132
			ಉತ್ತರಕ್ಕೆ	ಉಳಿಕೆ ಜಮೀನು ಮತ್ತ ಸರ್ವೆ ನಂ.132
			ದಕ್ಷಿಣಕ್ಕೆ	ಕಣ್ಣ ಬಡಾವಣೆ
ವಡೇರಹಳ್ಳಿ	20	6.19	ಪೂರ್ವಕ್ಕೆ	ಉಳಿಕೆ ಜಮೀನು
			ಪಶ್ಚಿಮಕ್ಕೆ	ರಸ್ತೆ
			ಉತ್ತರಕ್ಕೆ	ಸರ್ವೆ ನಂ.41
			ದಕ್ಷಿಣಕ್ಕೆ	ಉಳಿಕೆ ಜಮೀನು
	ಜುಮ್ಲಾ	67.25		

ನಿರ್ದೇಶಕರು

PR.382

ಅನುಬಂಧ - [illegible]

10

ಕೃಷಿ ಮಾರಾಟ ನಿರ್ದೇಶಕರ ಕಛೇರಿ, ನಂ.16, 11ನೇ ರಾಜಭವನ ರಸ್ತೆ, ಬೆಂಗಳೂರು

ಅಧಿಸೂಚನೆ

ಸಂಖ್ಯೆ: ಕೃಮಾಇ/ನಿಯವಿ/ಖಾಮಾಪ್ರಾಂ/42/11-12, ಬೆಂಗಳೂರು, ದಿನಾಂಕ: 30-10-2013

ಮೆಟ್ರೋ ಕ್ಯಾಶ್ ಅಂಡ್ ಕ್ಯಾರಿ ಇಂಡಿಯಾ ಪ್ರೈವೇಟ್ ಲಿಮಿಟೆಡ್, ನಂ.26/3, ಇಂಡಸ್ಟ್ರಿಯಲ್ ಸಬರ್ಬ್ ಎ ಬ್ಲಾಕ್, ವಾರ್ಡ್-9, ಸುಬ್ರಹ್ಮಣ್ಯನಗರ, ಬೆಂಗಳೂರು-560055 ಇವರು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮಾವಳಿ 1968ರ ನಿಯಮ 87ಬಿ(1)(ಬಿ)ರ ಅನ್ವಯ ಖಾಸಗಿ ಮಾರುಕಟ್ಟೆ ಸ್ಥಾಪನೆಗೆ ಲೈಸೆನ್ಸ್ ಮಂಜೂರಾತಿಗಾಗಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ನಿಯಮ 87ಬಿ(7) ರಲ್ಲಿ ನಿಗಧಿಪಡಿಸಿರುವಂತೆ, ಸದರಿಯವರು ಉದ್ದೇಶಿಸಿರುವ ಖಾಸಗಿ ಮಾರುಕಟ್ಟೆಯಲ್ಲಿ ವ್ಯಾಪಾರ ವಹಿವಾಟಿಗೆ ಸೌಲಭ್ಯಗಳನ್ನು ಒದಗಿಸಿದ್ದು, ಇವುಗಳನ್ನು ದೃಢೀಕರಿಸಿಕೊಳ್ಳಲಾಗಿದೆ.

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966ರ ಕಲಂ 6(2)ರಲ್ಲಿ ಪ್ರದತ್ತವಾದ ಅಧಿಕಾರದ ಮೇರೆಗೆ ಕೃಷಿ ಮಾರಾಟ ನಿರ್ದೇಶಕನಾಗಿರುವ ಪಿ.ಎಸ್.ವಸ್ತದ ಆದ ನಾನು ಅಧಿಸೂಚಿತ ಕೃಷಿ ಉತ್ಪನ್ನಗಳ ಖರೀದಿ ಹಾಗೂ ಮಾರಾಟಕ್ಕಾಗಿ ಅನುಸೂಚಿಯಲ್ಲಿ ನಿಗಧಿಪಡಿಸಿದ ಈ ಕೆಳಕಂಡ ಸ್ಥಳವನ್ನು ಖಾಸಗಿ ಮಾರುಕಟ್ಟೆ ಪ್ರಾಂಗಣವೆಂದು ಘೋಷಿಸಿದ್ದೇನೆ.

ಅನುಸೂಚಿ

ಸರ್ವೆ ನಂ.33/1ಎ, ಬರ್ತನ ಅಗ್ರಹಾರ, ಬೇಗೂರ್ ಹೋಬಳಿ, ಹೊಸೂರು ಮುಖ್ಯ ರಸ್ತೆ, ಬೆಂಗಳೂರು ಇಲ್ಲಿ 3 ಎಕರೆ 15 ಗುಂಟೆ ಪ್ರದೇಶದ ಸೀಮಾಬದ್ಧ ಸ್ಥಳ

ಪೂರ್ವಕ್ಕೆ	: ಸರ್ವೆ ನಂ.32,34 & 39 ಜಮೀನು.
ಪಶ್ಚಿಮಕ್ಕೆ	: ರಾಯಲ್ ಸಾಫ್ಟ್ ಅಪಾರ್ಟ್‌ಮೆಂಟ್‌ಗೆ ಸೇರಿದ ಸರ್ವೆ ನಂ.33/1ಎ ರ ಉಳಿದ ಜಮೀನು.
ಉತ್ತರಕ್ಕೆ	: ಸರ್ವೆ ನಂ.33/2 & 33/3 ಜಮೀನು.
ದಕ್ಷಿಣಕ್ಕೆ	: ಎನ್.ಹೆಚ್-7 ರಸ್ತೆ.

ನಿರ್ದೇಶಕರು,
ಕೃಷಿ ಮಾರಾಟ ಇಲಾಖೆ,
ಬೆಂಗಳೂರು

P.R. 2377
S.C: 50

ಕೃಷಿ ಮಾರಾಟ ನಿರ್ದೇಶಕರ ಕಛೇರಿ, ನಂ.16, 11ನೇ ರಾಜಭವನ ರಸ್ತೆ, ಬೆಂಗಳೂರು

ಅಧಿಸೂಚನೆ

ಸಂಖ್ಯೆ: ಕೃಮಾಇ/246/ನಿಯವಿ/2009, ಬೆಂಗಳೂರು, ದಿನಾಂಕ: 28-09-2013

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966ರ ಕಲಂ 6(2)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕದಲ್ಲಿನ ಕೃಷಿ ಮಾರಾಟ ಇಲಾಖೆಯ ನಿರ್ದೇಶಕನಾಗಿರುವ ಪಿ.ಎಸ್.ವಸ್ತದ ಆದ ನಾನು ಅಧಿಸೂಚನೆ ಸಂಖ್ಯೆ: ಕೃಮಾಇ/246/ನಿಯವಿ/2009, ದಿನಾಂಕ: 07-10-2009 ರಲ್ಲಿ ದಾಸನಪುರ ಉಪ ಮಾರುಕಟ್ಟೆಯಲ್ಲಿ ಆಲೂಗಡ್ಡೆ ಮತ್ತು ಈರುಳ್ಳಿ ಕೃಷಿ ಉತ್ಪನ್ನಗಳನ್ನು ಮಾರಾಟ ನಿಯಂತ್ರಣಕ್ಕಾಗಿ ಒಳಪಡಿಸಿರುವುದನ್ನು ರದ್ದುಪಡಿಸಿ ಈ ಕೆಳಕಂಡ ಕೃಷಿ ಉತ್ಪನ್ನಗಳ ಮಾರಾಟ ನಿಯಂತ್ರಣಕ್ಕಾಗಿ ಒಳಪಡಿಸಿ ಘೋಷಿಸಿದ್ದು, ಉಳಿದಂತೆ ಸದರಿ ಅಧಿಸೂಚನೆಯಲ್ಲಿನ ಅಂಶಗಳು ಮುಂದುವರೆಯುತ್ತವೆ.

ಕೃಷಿ ಉತ್ಪನ್ನಗಳು

1.ಹತ್ತಿ (ಬೀಜ ತೆಗೆದ ಮತ್ತು ತೆಗೆಯದ), 2.ಎಲ್ಲಾ ಗೂಡುಗಳು, 3.ಸಜ್ಜೆ, 4.ಜವೆ ಗೋಧಿ, 5. ಜೋಳ, 6.ಕಂಬು, 7.ಮೆಕ್ಕೆಜೋಳ, 8.ನವಣೆ, 9.ಭತ್ತ, 10.ರಾಗಿ, 11.ಅಕ್ಕಿ, 12.ಸಾಮೆ (ಸಾವೆ), 13.[illegible] 14.[illegible] 15.ಬೊಂಬು, 16.ಬತ್ತ, 17.ಹುಚ್ಚೆಬೀಜ, 18.ಹೊಂಗೆಬೀಜ, 19.ಬೇವಿನಬೀಜ, 20.ಸೀಗೇಕಾಯಿ, 21.ಹುಣಸೇಹಣ್ಣು, 22.ಹುಣಸೇಬೀಜ, 23.[illegible] 24.[illegible], 25.ಬೋರೆಹಣ್ಣು 26.ಹುಳಿಹಣ್ಣುಗಳು, 27.ಚಕ್ಕೋತನ ಹಣ್ಣು, 28.ಬೇರಲೆಹಣ್ಣು (ಸೀಬೆಹಣ್ಣು), 29.ದ್ರಾಕ್ಷಿ, 30.[illegible], 31.[illegible], 32.ಗಂಧಹಣ್ಣು, 33.ಕರಬೂಜ, 34.ಮಾವಿನಹಣ್ಣು, 35.ಮೂಸಂಬಿ, 36.ಮರಸೇಬು, 37.ಪೈನಾಪಲ್(ಅನಾನಸ್), 38.[illegible](ಬಾಳೆಹಣ್ಣು), 39.ದಾಳಿಂಬೆಹಣ್ಣು, 40.ಸಪೋಟಾ, 41.ಸಿದ್ದೋಟ, 42.ಕಿತ್ತಳೆ, 43.ಕಲ್ಲಂಗಡಿ, 44.ನೆಲಗಡಲೆ(ಶೇಂಗಾ) (ಕಾಯಿ ಮತ್ತು ಬೀಜ), 45.ಹರಳುಬೀಜ, 46.ಹತ್ತಿಬೀಜ, 47.ಅಗಸೆಬೀಜ, 48.ಸಾಸುವೆ, 49.ಹುಚ್ಚೆಳ್ಳು, 50.ಕುಸುಬೆ, 51.ಎಳ್ಳು, 52.ಸೂರ್ಯಕಾಂತಿಬೀಜ, 53.ಸೋಯಾಬೀನ್, 54.ಅಡಿಕೆ, 55.ಗೋಡಂಬಿಬೀಜ, 56.ಒಣಮೆಣಸಿನಕಾಯಿ, 57.ತೆಂಗಿನಕಾಯಿ, 58.ಕೊಬ್ಬರಿ, 59.ಕೊತ್ತಂಬರಿಬೀಜ (ಧನಿಯಾ), 60.ಬೆಳ್ಳುಳ್ಳಿ, 61.ಶುಂಠಿ, 62.ಮೆಂತ್ಯ, 63.ಕಾಳುಮೆಣಸು, 64.ಅರಿಶಿನ, 65.ಅಲಸಂದೆ (ಇಡೀ ಮತ್ತು ಒಡೆದ), 66.ಅವರೆ (ಇಡೀ ಮತ್ತು ಒಡೆದ), 67.ಕಡಲೆ (ಇಡೀ ಮತ್ತು ಒಡೆದ), 68.ಉದ್ದು (ಇಡೀ ಮತ್ತು ಒಡೆದ), 69.ಬಲ್ಲರ್ (ಇಡೀ ಮತ್ತು ಒಡೆದ), 70.ಹೆಸರು (ಇಡೀ ಮತ್ತು ಒಡೆದ), 71.ಹುರುಳಿ, 72.ಲಾಕ್ (ಇಡೀ ಮತ್ತು ಒಡೆದ), 73.ಮಡಿಕೆ (ಮಟಕಿ) (ಇಡೀ ಮತ್ತು ಒಡೆದ), 74.ಚೆನ್ನಂಗಿ (ಮಸೂರಿ) (ಇಡೀ ಮತ್ತು ಒಡೆದ), 75.ಬಟಾಣಿ, 76.ತೊಗರಿ (ಇಡೀ ಮತ್ತು ಒಡೆದ), 77.ಮೋಠ್ (ಇಡೀ ಮತ್ತು ಒಡೆದ), 78.ಎಲ್ಲಾ ತರಕಾರಿಗಳು (ಸೊಪ್ಪುಗಳು ಸೇರಿಸಿ) (ಗರ್ಕಿನ್ ಹೊರತುಪಡಿಸಿ), 79.ಕಾಯಿಗಳು, 80.ಹಸಿರುಮೆಣಸಿನಕಾಯಿ, 81.ಈರುಳ್ಳಿ, 82.ಆಲೂಗೆಡ್ಡೆ, 83.ಸುವರ್ಣಗೆಡ್ಡೆ, 84.ಸಿಹಿಗೆಣಸು (ಗೆಣಸು), 85.ಟೊಮ್ಯಾಟೋ, 86.ವೀಳ್ಯದೆಲೆ, 87.ಬೆಲ್ಲ, 88.ತೆಂಗಿನಕಡ್ಡಿ, 89.ಒಣದ್ರಾಕ್ಷಿ.

ಪಿ.ಎಸ್.ವಸ್ತದ,
ನಿರ್ದೇಶಕರು,
ಕೃಷಿ ಮಾರಾಟ ಇಲಾಖೆ, ಬೆಂಗಳೂರು

P.R. 2378
S.C: 30